# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ

## ಸಿ.ಸಿ. ನಂ. 693 / 2024

ಸಿಡಬ್ಲ್ಯೂ- 1
ಪಿಡಬ್ಲ್ಯೂ- 1

ದಿನಾಂಕಃ **24.07.2025.**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರುಃ | - | ಶರಣಬಸಪ್ಪ |
| ತಂದೆಯ/ಗಂಡನ ಹೆಸರುಃ | - | ಮಲ್ಲಿಕಾರ್ಜುನ |
| ವಯಸ್ಸುಃ | -? | **42** ವರ್ಷ |
| ಉದ್ಯೋಗಃ | - | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಗುರುಮಿಠಕಲ್. |
| ವಾಸಸ್ಥಳಃ | - | ಗುರುಮಿಠಕಲ್. |

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ

ಕಳೆದ **2** ವರ್ಷಗಳಿಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಗುರುಮಿಠಕಲ್ ದಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ **18.04.2024** ರಂದು ನಾನು ಕರ್ತವ್ಯದಲ್ಲಿ ಇದ್ದಾಗ ಮಕ್ಕಳ ಸಹಾಯವಾಣಿ **1098** ನೇದ್ದರ ಸಿಬ್ಬಂದಿಯಿಂದ ನನಗೆ ಫೋನ್ ಕರೆ ಬಂದಿತ್ತು. ಯಾದಗಿರಿ ತಾಲೂಕಿನ ಹೋನಗೇರಾ ಗ್ರಾಮದಲ್ಲಿ ಸಮೂಹಿಕ ವಿವಾಹದಲ್ಲಿ ಬಾಲ್ಯ ವಿವಾಹ ಆಗುತ್ತಿರುವ ಬಗ್ಗೆ ಮಾಹಿತಿ ಬಂದಿತ್ತು. ನಂತರ ನಾನು ಮತ್ತು ಮೇಲ್ವಚಾರಕಿಯಾದ ಚಾಸಾ-**4** ರವರು ಹಾಗೂ ಜಿಲ್ಲಾ ಮಕ್ಕಳ ರಕ್ಷಣ ಅಧಿಕಾರಿಗಳ ಕಚೇರಿಯಿಂದ ಸಿಬ್ಬಂದಿ ನಾವೆಲ್ಲರೂ ಸೇರಿ ಪೊಲೀಸರ ನೇರವಿನೊಂದಿಗೆ ಹೋನಗೇರಾ ಗ್ರಾಮದ ಶ್ರೀ ತಾತಯ್ಯ ದೇವಸ್ಥಾನದ ಹಿಂದುಗಡೆ ಬಾಲ್ಯ ವಿವಾಹ ಮಾಡುತ್ತಿರುವ ಬಗ್ಗೆ ಗಮನಿಸಿ ಬಾಲಕಿಯಾದ ಮಯಾ ತಂದೆ ಬಸವರಾಜ ಚಾಸಾ-**5** ರವರನ್ನು ರಕ್ಷಣೆ ಮಾಡಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಯಾದಗಿರಿ ರವರಿಗೆ ಒಪ್ಪಿ ಸಲಾಯಿತು. ನಂತರ ಬಾಲಕಿನ್ನು ಅಪ್ತಸಮಲೋಚನೆ ಮಾಡಿ ವರದಿಯ ಜೊತೆಗೆ ಫೋಟೋವನ್ನು ಸಹ ನೀಡಿದ್ದರು. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಯಾದಗಿರಿ ರವರು ಪ್ರಕರಣ ದಾಖಲಿಸಲು ಪತ್ರ ನನಗೆ ನೀಡಿದ್ದರು. ಅದೇ ರೀತಿ

ಚಾಸಾ-5 ರವರ ಶಾಲಾ ದೃಡೀಕರಣ ಪ್ರಮಾಣ ಪತ್ರವನ್ನು ಸಹ ನೀಡಿದ್ದರು. ಈ ಎಲ್ಲಾ ದಾಖಲೆಗಳನ್ನು ನಾನು ಪಡೆದುಕೊಂಡು ಮಹಿಳಾ ಪೊಲೀಸ್ ಠಾಣೆಗೆ ದೂರನ್ನು ನೀಡಿದ್ದೆ. ವರನ ಹೆಸರು ಅಮಾತ್ಯಪ್ಪ ಇರುತ್ತದೆ. ವರನ ತಂದೆಯ ಹೆಸರು ತಿಮ್ಮಣ್ಣ ಇರುತ್ತದೆ. ವರನ ತಾಯಿಯ ಹೆಸರು ಯಲ್ಲಮ್ಮ ಇರುತ್ತದೆ. ಬಾಲಕಿಯ ತಂದೆಯ ಹೆಸರು ಬಸವರಾಜ ಇರುತ್ತದೆ. ಬಾಲಕಿಯ ತಾಯಿಯ ಹೆಸರು ಜಗ್ಗಮ್ಮ ಇರುತ್ತದೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 1(ಎ)ಎಂದು ಗುರುತಿಸಲಾಯಿತು. ದೂರನ್ನು ನೀಡಿದ ನಂತರ ದಿನಾಂಕಃ 25.04.2024 ರಂದು ಪೊಲೀಸರು ನನ್ನನ್ನು ಪಂಚನಾಮೆ ಗೊಸ್ಕರ ಗುನ್ನಾ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದರು ಅಲ್ಲಿ ನಾನು ಮದುವೆಯಾದ ಸ್ಥಳವನ್ನು ಪೊಲೀಸರಿಗೆ ತೋರಿಸಿರುತ್ತೇನೆ. ಅಲ್ಲಿ ಪೊಲೀಸರು ಕಚ್ಚ ನಕಾಶೆಯನ್ನು ತಯಾರಿಸಿ ಜಿ.ಪಿ.ಎಸ್ ಮೂಲಕ ಪೋಟೋವನ್ನು ತೆಗೆದುಕೊಂಡಿದ್ದರು. ಅದೇ ರೀತಿ ಪಂಚನಾಮೆಗೆ ನನ್ನ ಸಹಿಯನ್ನು ಪಡೆದುಕೊಂಡಿದ್ದರು. ಸಾಕ್ಷಿಯು ತಾನು ಸಹಿ ಮಾಡಿದ ಪಂಚನಾಮೆಯನ್ನು ನೋಡಿ ಗುರುತಿಸಿದು ಅದನ್ನು ನಿಪಿ 2 ಎಂದು ಗುರತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 2(ಎ)ಎಂದು ಗುರುತಿಸಲಾಯಿತು. ಸಾಕ್ಷಿಯು ಎರಡು ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿರುತ್ತಾರೆ ಸದರಿ ಪೋಟೋಗಳನ್ನು ನಿಪಿ 3 ಮತ್ತು 4 ಎಂದು ಗುರುತಿಸಲಾಯಿತು. ಸಾಕ್ಷಿಯು ಗುಡಿಯ ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 5 ಎಂದು ಗುರುತಿಸಲಾಯಿತು. ಬಾಲ್ಯ ವಿವಾಹ ಮಾಡುತ್ತಿದ್ದವರನ್ನು ನಾನು ನೋಡಿದರೆ ಗುರುತಿಸುತ್ತೇನೆ. ಅವರೆಲ್ಲರೂ ಗೈರು ಇರುತ್ತಾರೆ. ಅವರನ್ನು ಗುರುತಿಸಲು ಆರೋಪಿತರ ಪರ ವಕೀಲರು ತಕರಾರು ಮಾಡಿರುವುದಿಲ್ಲ.

ಈ ಹಂತದಲ್ಲಿ ಸ.ಸ.ಅ ರವರ ಕೋರಿಕೆಯ ಮೇರೆಗೆ ಮುಖ್ಯ ವಿಚಾರಣೆಯನ್ನು ಮುಂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.